



ಹೀರುತ್ತವೆ. ತನ್ನ ಈ ಚಿಕ್ಕ ಗಾತ್ರದಿಂದಲೇ ಹೂವಿನ ಮೇಲೆ ಬೇಕಾದ ಹಾಗೆ ಕುಳಿತು ಹೊಟ್ಟೆ ತುಂಬಿಕೊಳ್ಳುತ್ತದೆ. ಇಂಗ್ಲಿಷ್‌ನಲ್ಲಿ ಇದರ ಹೆಸರು ಸನ್ ಬರ್ಡ್.

ಹೆಣ್ಣು ಹಕ್ಕಿಗಿಂತಲೂ ಗಂಡು ಹಕ್ಕಿ ಹೆಚ್ಚು ಆಕರ್ಷಕವಾಗಿರುತ್ತದೆ! ಗಂಡು ಹಕ್ಕಿಯ ಕುತ್ತಿಗೆ ಹಾಗೂ ಬೆನ್ನಿನ ಭಾಗ ಕಡು ನೀಲಿ. ಕುತ್ತಿಗೆ ಭಾಗ ಬಿಸಿಲಿಗೆ ನೀಲಿ ಬಣ್ಣದಲ್ಲಿ ಹೊಳೆಯುತ್ತದೆ. ಹೊಟ್ಟೆಯ ಭಾಗ ಹಳದಿ ಬಣ್ಣದಲ್ಲಿರುತ್ತದೆ.

ಹೆಣ್ಣು ಹಕ್ಕಿಯ ಕುತ್ತಿಗೆ ಹಾಗೂ ಬೆನ್ನು ಬೂದು ಬಣ್ಣದಲ್ಲಿದ್ದು ಹೊಳಪಾಗಿಯೂ ಇರುವುದಿಲ್ಲ. ಹೊಟ್ಟೆಯ ಭಾಗ ಹಳದಿ. ಜೋಳಿಗೆಯಾಕಾರದ ಗೂಡು ಕಟ್ಟಿ ಮರಿಗಳ ಪೋಷಣೆ ಮಾಡುತ್ತವೆ.

**ಚಿತ್ರ- ಬರಹ: ಗಣೇಶ ಕಾಳೀಸರ**

